# ಆನೆಗಳಿಗೂ ರೇಡಿಯೊ ಕಾಲರ್

ಹುಲಿಗಳಿಗೆ ರೇಡಿಯೊ ಕಾಲರ್ ಅಳವಡಿಸಿ ಅಧ್ಯಯನ ನಡೆಸುವ ಯೋಜನೆ ರಾಜ್ಯದಲ್ಲಿ ಹಲವಾರು ವರ್ಷಗಳಿಂದ ನಡೆದಿದೆ. ಆದರೆ ಕಾಡಾನೆಗಳಿಗೆ ರೇಡಿಯೊ ಕಾಲರ್ ಅಳವಡಿಸುವ ಕೊಡಗಿನ ಈ ಪ್ರಯತ್ನ ರಾಜ್ಯದಲ್ಲೇ ಮೊದಲನೆಯದು.

■ ಚಿತ್ರ– ಲೇಖನ: **ಪುತ್ತರಿರ ಕರುಣ್ ಕಾಳಯ್ಯ**










ಕಾಡಾನೆಗಳು ಹೊಲಗಳಿಗೆ, ತೋಟಗಳಿಗೆ ನುಗ್ಗುವ ಪ್ರಕರಣಗಳು ಒಂದೇ ಸಮನೆ ಏರುತ್ತಿವೆ. ಅರಣ್ಯಭೂಮಿಯ ಒತ್ತುವರಿ ಇದಕ್ಕೊಂದು ಕಾರಣ. ಬಹಳಷ್ಟು ಕಡೆ ಈ ಒತ್ತುವರಿ ಸಕ್ರಮವಾಗಿರುವುದೂ ಇದೆ. ಇನ್ನೊಂದೆಡೆ ಆನೆಗಳ ಸಂಖ್ಯೆಯೂ ಹೆಚ್ಚುತ್ತಿದೆ. ಸಹಜವಾಗಿಯೇ ಕಾಡಾನೆಗಳು ಆಹಾರ ಅರಸಿ ಬರುವುದು ಜನವಸತಿ ಇರುವ ಹಳ್ಳಿಗಳ ಅಂಚಿಗೆ. ಈ ಕಾಡಾನೆಗಳನ್ನು ಮತ್ತೆ ಕಾಡಿಗೆ ಓಡಿಸುವುದು ಅರಣ್ಯ ಇಲಾಖೆಯ ಸಿಬ್ಬಂದಿಗೆ ಸದಾ ತಲೆನೋವಿನ ಕೆಲಸ. ಗುಂಪು ಗುಂಪಾಗಿ ಬರುವ ಆನೆಗಳು ಮರಳಿ ಕಾಡಿಗೆ ಹೋಗುವ ಬದಲು ಊರಿಂದೂರಿಗೆ ಅಲೆದಾಡುವುದೂ ಇದೆ. ತೋಟಗಳಿಗೆ ಇವು ನುಗ್ಗಿದರೆ ಕಾಲಡಿ ಸಿಕ್ಕಿದ್ದೆಲ್ಲ ಧ್ವಂಸವೇ. ರೈತ ಕಷ್ಟಪಟ್ಟು ಬೆಳೆದದ್ದು ಹೀಗೆ ನಾಶವಾಗುವುದು ಸಹಿಸಲಾಗದ ನೋವುಂಟು ಮಾಡುತ್ತದೆ. ಕೆಲವೊಮ್ಮೆ ಆನೆಗಳ ಜೀವಕ್ಕೂ ಅಪಾಯ ಎರಗುವುದಿದೆ. ವಿದ್ಯುತ್ ತಂತಿ ಬೇಲಿಯನ್ನು ದಾಟಲು ಹೊರಟ ಆನೆಗಳು ಜೀವ ಕಳೆದುಕೊಂಡ ಪ್ರಕರಣಗಳು ಸಾಕಷ್ಟು ನಡೆದಿವೆ.

ಕಾಡಾನೆಗಳ ಹಾವಳಿ ನಿಯಂತ್ರಣಕ್ಕೆ ರಾಜ್ಯದಲ್ಲಿ ಸಾಕಷ್ಟು ಪ್ರಯತ್ನಗಳು ನಡೆದಿವೆ. ಕೊಡಗಿನಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಗೆ ಇದು ಸದಾ ಚಿಂತೆಯೊಡ್ಡುವ ವಿಷಯ. ಕಾಡಾನೆಗಳನ್ನೂ ರಕ್ಷಿಸಬೇಕು, ರೈತರ ಬೆಳೆಗಳಿಗೂ ರಕ್ಷಣೆ ಕೊಡಬೇಕು. ಹಲವಾರು ನಿಯಂತ್ರಣ ಕ್ರಮಗಳನ್ನು ಕೈಗೊಂಡಿದ್ದರೂ ಕಾಡಾನೆಗಳ ಹಾವಳಿಯನ್ನು ಸಂಪೂರ್ಣವಾಗಿ ತಡೆಯಲು ಆಗುತ್ತಿಲ್ಲ.

ಇದೀಗ ಕೊಡಗಿನ ಅರಣ್ಯ ಇಲಾಖೆ ಅಧಿಕಾರಿಗಳು ಕಾಡಾನೆಗಳ ದಾಳಿಯನ್ನು ತಡೆಯಲು ಹೊಸದೊಂದು ಉಪಾಯವನ್ನು ಜಾರಿಗೆ ತಂದಿದ್ದಾರೆ. ಕಾಡಾನೆಗಳಿಗೆ ರೇಡಿಯೊ ಕಾಲರ್ ಅಳವಡಿಸುವುದೇ ಈ ಹೊಸ ಉಪಾಯ. ಹುಲಿಗಳಿಗೆ ರೇಡಿಯೊ ಕಾಲರ್ ಅಳವಡಿಸಿ ಅಧ್ಯಯನ ನಡೆಸುವ ಯೋಜನೆ ರಾಜ್ಯದಲ್ಲಿ ಹಲವಾರು ವರ್ಷಗಳಿಂದ ನಡೆದಿದೆ. ಆದರೆ ಕಾಡಾನೆಗಳಿಗೆ ರೇಡಿಯೊ ಕಾಲರ್ ಅಳವಡಿಸುವ ಈ ಪ್ರಯತ್ನ ರಾಜ್ಯದಲ್ಲೇ ಮೊದಲನೆಯದು.

ಕೊಡಗಿನಲ್ಲಿ ಇತ್ತೀಚೆಗೆ ನಾಲ್ಕು ಹೆಣ್ಣಾನೆಗಳಿಗೆ ಜಿಪಿಎಸ್ ಸಂಪರ್ಕಿತ ರೇಡಿಯೋ ಕಾಲರ್‌ಗಳನ್ನು ಯಶಸ್ವಿಯಾಗಿ ಅಳವಡಿಸಲಾಗಿದೆ.